(ಇ) ಆದರೆ ದೇವಾಲಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ದುರಸ್ಥಿ ಹಾಗೂ ಒಳಚರಂಡಿ ಕಾಮಗಾರಿಗೆ ಸಂಬಂಧಿಸಿದಂತೆ ದೇವಾಲಯದ ಆಡಳಿತ ವರ್ಗದವರು ರೂ. 86.50 ಲಕ್ಷದ ಪ್ರಸ್ಥಾವನೆಯನ್ನು ಸಲ್ಲಿಸಿದ್ದು, ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

(ಈ) ಶ್ರೀ ಹುಲಿಗೆಮ್ಮ ದೇವಾಲಯದಲ್ಲಿ ವಾರ್ಷಿಕ ಆದಾಯವು 2007–08ನೇ ಸಾಲಿನಲ್ಲಿ ರೂ. 1,59,89,100/– ಇರುವುದರಿಂದ ಸರ್ಕಾರದಿಂದ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

50 (143) ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೊಪ್ಪಳದಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು;

(ಇ) ಮೇಲ್ಕಂಡ ಕಾಲೇಜುಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಅನುದಾನ ಎಷ್ಟು;

(ಈ) ಮುಂಬರುವ ಶೈಕ್ಷಣಿಕ ವರ್ಷದಿಂದ ಮೇಲ್ಕಂಡ ಕಾಲೆಜುಗಳನ್ನು ತೆರೆಯಲಾಗುವುದೇ?

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

(ಅ) ಕೊಪ್ಪಳದಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

(ಆ) ಉದ್ಭವಿಸುವುದಿಲ್ಲ

(ಇ) ಉದ್ಭವಿಸುವುದಿಲ್ಲ

(ಈ) ಉದ್ಭವಿಸುವುದಿಲ್ಲ

51 (40) ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಇತ್ತೀಚಿಗೆ ಅನುದಾನಕ್ಕೆ ಒಳಪಟ್ಟ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಆಡಳಿತ ಮಂಡಳಿಯ ಶಾಲಾ ಕಾಲೇಜುಗಳ ಶಿಕ್ಷಕೇತರ ಸಿಬ್ಬಂದಿಯನ್ನು (ಅಟೆಂಡರ್, ಜವಾನ) ನೇಮಕಾತಿಗೆ ಅವಕಾಶ ಮಾಡದಿರುವುದು ನಿಜವೇ;

(ಆ) ಈ ನೇಮಕಾತಿಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?